ಕೊಪ್ಪಳ ಜಿಲ್ಲೆಯ ರೀಸರ್ವೇಸಿಂಗ್ ಜಿಲ್ಲಾ ಹೆದ್ದಾರಿಯಲ್ಲಿ ಸೇರಿಸುವ ಬಗ್ಗೆ

428 (3804) : ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಿಲ್ಲಾ ಪ್ಯಾಕೇಜ್ ರಾಜ್ಯ ಹೆದ್ದಾರಿ ಕೊಪ್ಪಳ ಜಿಲ್ಲೆಯ ರಿ-ಸರ್ವೇಸಿಂಗ್ ಜಿಲ್ಲಾ ಹೆದ್ದಾರಿಯಲ್ಲಿ ಸೇರಿಸಲಾಗಿದೆಯೇ;

ಆ) ಇಲ್ಲವಾದಲ್ಲಿ, ಸೇರಿಸುವ ಯೋಜನೆ ಇದೆಯೇ;

ಇ) ಇಲ್ಲದಿದ್ದಲ್ಲಿ ಇದಕ್ಕೆ ಕಾರಣವೇನು;

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ತೆಗೆದುಕೊಂಡ ರಾಜ್ಯ ಹೆದ್ದಾರಿಯ ನಿರ್ವಹಣೆಯ ಪ್ಯಾಕೇಜ್ ಅಡಿಯಲ್ಲಿ ಕೊಪ್ಪಳ ಜಿಲ್ಲಾ ವ್ಯಾಪ್ತಿಯಲ್ಲಿ ಮರು ಡಾಂಬರೀಕರಣ ಸೇರಿರುವುದಿಲ್ಲ.

ಆ) ಸಧ್ಯದಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಇ) ಹೆದ್ದಾರಿಯ ನಿರ್ವಹಣೆ ಕಾರ್ಯದ ಅಂದಾಜು ಪಟ್ಟಿಯನ್ನು ತಯಾರಿಸುವಾಗ ಮರುಡಾಂಬರೀಕರಣವನ್ನು ರಸ್ತೆಯ ಕೆಳಮಣ್ಣಿನ ಗುಣಮಟ್ಟ ಅಂದರೆ ಸಿ.ಬಿ.ಆರ್. ನ ಪ್ರಮಾಣ 6 ಕ್ಕಿಂತ ಹೆಚ್ಚು ಇದ್ದ ರಸ್ತೆಯ ಭಾಗಗಳಿಗೆ ಮಾತ್ರ ಒದಗಿಸಲಾಗಿದೆ. ಸಿ.ಬಿ.ಆರ್. ಪ್ರಮಾಣ 6 ಕ್ಕಿಂತ ಕಡಿಮೆ ಇರುವ ರಸ್ತೆಗಳನ್ನು ಬಲಪಡಿಸಬೇಕಾಗಿರುವುದರಿಂದ ಇದು ರಾಜ್ಯ ಹೆದ್ದಾರಿಯ ನಿರ್ವಹಣೆಯ ಯೋಜನೆಯಲ್ಲಿ ಸೇರಿರುವುದಿಲ್ಲ.

ಈ) ಉತ್ತರ ಮೇಲಿನಂತೆ

ಚಿಕ್ಕ ಮಗಳೂರು ಜಿಲ್ಲೆಯಲ್ಲಿ ಸಾಮಾಜಿಕ ಅರಣ್ಯ ಯೋಜನೆ

429 (3319) : ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2001-02, 2002-03ನೇ ವರ್ಷದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಸಮಾಜಿಕ ಅರಣ್ಯ ಯೋಜನೆಯ ವ್ಯಾಪ್ತಿಯಲ್ಲಿ ಎಷ್ಟು ಸಸಿಗಳನ್ನು ನೆಡುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಆ) ಯಾವ ಯಾವ ಪ್ರದೇಶಗಳಲ್ಲಿ ಎರಡು ವರ್ಷ ಸಸಿ ನೆಡುವ ಕಾರ್ಯಕ್ರಮ ಹಾಕಿಕೊಂಡಿದೆ. ಈ ಕಾರ್ಯಕ್ರಮಕ್ಕೆ ಎಷ್ಟು ಹಣ ಬಿಡುಗಡೆಯಾಗಿದೆ;

ಇ) ಈ ಸಸಿಗಳಲ್ಲಿ ಎಷ್ಟು ಸಸಿಗಳು ಬೆಳೆದಿವೆ ಹಾಗೂ ಒಣಗಿರುವ ಸಸಿಗಳೆಷ್ಟು?

ಶ್ರೀ ಕೆ. ಹೆಚ್. ರಂಗನಾಥ (ಅರಣ್ಯ ಸಚಿವರು)

ಅ)

ವರ್ಷ	ನೆಡಲಾದ ಸಸಿಗಳ ಸಂಖ್ಯೆ
2001-02	33,670
2002-03	1,47,450

ಆ) ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಮೂಡಿಗೆರೆ, ಕಡೂರು, ತರೀಕೆರೆ, ಶೃಂಗೇರಿ, ಎನ್.ಆರ್. ಪುರ, ಕೊಪ್ಪ ವಲಯಗಳಲ್ಲಿ ಸಸಿ ನೆಡುವ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ 2001-02ರಲ್ಲಿ ಒಟ್ಟು 15.15 ಲಕ್ಷ ರೂ.ಗಳು ಮತ್ತು 2002-03 ರಲ್ಲಿ ಒಟ್ಟು 10.93